# ಪಠ್ಯಕ್ರಮದ ವಿಷಯವನ್ನು ಕಥೆಗಳೊಂದಿಗೆ ಬೆಸೆಯುವುದು | ನನ್ನ ಅನುಭವಗಳು

ಮಧುಮಿತಾ ಆರ್.

ಕಥೆಗಳ ಕುರಿತು ನಾನು ಹೊಂದಿರುವ ಅದಮ್ಯ ಪ್ರೀತಿಯ ಕಾರಣ ತೊಡಗಿಸಿಕೊಳ್ಳುವಿಕೆಯ ಈ ಮಾಧ್ಯಮವನ್ನು ನಾನು ತರಗತಿಯೊಳಗೆ ಕೊಂಡು ಹೋಗಿದ್ದೇನೆ. ಕಥೆಗಳನ್ನು ಓದುವ ಮತ್ತು ಕೇಳುವ ಕುರಿತು ನಾನು ಹೊಂದಿರುವ ಕುತೂಹಲಗಳಲ್ಲಿ ಕೆಲವಾದರೂ ಚಿಕ್ಕ ಮಕ್ಕಳ ಮೇಲೆ ಪ್ರಭಾವ ಬೀರಬಹುದೆಂಬ ಆಸೆ ನನ್ನದು.

ಕಳೆದ ವರ್ಷ ಜೂನ್‌ತಿಂಗಳನಲ್ಲಿ ಒಂದು ದಿನ ಮಧ್ಯಪ್ರದೇಶದ ಸಾಗರದಲ್ಲಿರುವ ಒಂದು ಶಾಲೆಗೆ ನಿಯಮಿತ ಭೇಟಿಯ ವೇಳೆ ಮಕ್ಕಳಿಗೆ ಹೇಳುವುದಕ್ಕಾಗಿಯೇ ಒಂದಷ್ಟು ಕಥೆಗಳನ್ನು ಸಿದ್ಧಪಡಿಸಿಕೊಂಡು ಹೋಗಿದ್ದೆ. I ರಿಂದ III ನೇ ತರಗತಿಯವರೆಗಿನ ಶಿಕ್ಷಕಿಯು ಬಹು ದರ್ಜೆಯ ಮತ್ತು ಬಹು ಮಟ್ಟಗಳ (multi-grade, multi-level-MGML) ಶಿಕ್ಷಕಿಯಾಗಿದ್ದರು. ಆ ದಿನದ ಯೋಜನೆಯನ್ನು ನಾನು ಅವರೊಂದಿಗೆ ಚರ್ಚಿಸಿದ್ದೆ. ಒಂದು ಪುನರವಲೋಕನ ಮತ್ತು ಎರಡು ಪದ್ಯಗಳನ್ನು ಪೂರ್ಣಗೊಳಿಸುವ ಅಗತ್ಯವಿದೆಯೆಂದು ಶಿಕ್ಷಕಿಯು ನನಗೆ ತಿಳಿಸಿದರು. ಈ ಎರಡು ಪದ್ಯಗಳು ಪಠ್ಯಪುಸ್ತಕಕ್ಕೆ ಸಂಬಂಧಿಸಿದ್ದವು. ಅದರಲ್ಲಿ ಒಂದು ಪದ್ಯವು ಹಸುವಿಗೆ ಸಂಬಂಧಿಸಿದ್ದರೆ, ಇನ್ನೊಂದು ಗೂಡನ್ನು ಕಟ್ಟುತ್ತಿರುವ ಹಕ್ಕಿಗೆ ಸಂಬಂಧಿಸಿತ್ತು. ಹೀಗಾಗಿ, ಮಕ್ಕಳು ಈಗಾಗಲೇ ತಿಳಿದಿರುವ ಪ್ರಾಣಿಗಳ ಕುರಿತ ಪದ್ಯಗಳ ಪುನರವಲೋಕನಕ್ಕಾಗಿ ನಾವು ಒಟ್ಟಿಗೆ ಯೋಜನೆಯನ್ನು ರೂಪಿಸಿದೆವು.

ತದನಂತರ ನಾನು 'ಹರ್‌ಪೇಡ್ ಜರೂರಿ ಹೈ' (ಹಂತ 2, ಪ್ರಥಮ್‌ಬುಕ್ಸ್) ಕಥೆಯನ್ನು ಗಟ್ಟಿಯಾಗಿ ಓದಿದೆ.ಈ ಕಥೆಯು ಸಂಖ್ಯೆಗಳು, ವಿವಿಧ ಪ್ರಕಾರದ ಮರಗಳು, ಅವುಗಳ ಮೇಲೆ ಕುಳಿತುಕೊಳ್ಳುವ ಹಕ್ಕಿಗಳು, ವಿವಿಧ ಹೂವುಗಳು ಮತ್ತು ಅವು ಎಲ್ಲಿ ಬೆಳೆಯುತ್ತವೆ ಎಂಬುದನ್ನು ಉಲ್ಲೇಖಿಸುತ್ತದೆ. ಮಕ್ಕಳಿಗೆ ಪುಸ್ತಕದಲ್ಲಿದ್ದ ಆಲದ ಮರ, ಅಶ್ವತ್ಥದ ಮರ, ಬೇವಿನ ಮರ, ಹುಣಸೆ ಮರ, ನೇರಳೆ ಮರ ಮತ್ತು ಗಿಳಿ ಮತ್ತು ಜೇನ್ನೊಣದಂತಹ ಹಕ್ಕಿಗಳು ಮತ್ತು ಕೀಟಗಳ ಕುರಿತು ಅರಿವಿತ್ತು. ಆದರೆ ಬಾವಲಿಯು ಹೇಗೆ ನೇತಾಡುತ್ತದೆ ಎಂಬುದನ್ನು ಚಿತ್ರದ ಮೂಲಕ ತೋರಿಸಿದ ನಂತರವೂ ಪಾರಿವಾಳ ಮತ್ತು ಬಾವಲಿಯ ನಡುವಿನ ವ್ಯತ್ಯಾಸವನ್ನು ಗುರುತಿಸಲು ಅವರಿಗೆ ಸಾಧ್ಯವಾಗಲಿಲ್ಲ. ನಂತರ ಅದು ಬಾವಲಿ ಎಂದು ನಾನು ಅವರಿಗೆ ಹೇಳಿದಾಗ ಅವರಲ್ಲಿ ಒಬ್ಬ, ತಾನು ರಾತ್ರಿ ವೇಳೆ ಊಟದ ನಂತರ ಹೊರಗಡೆ ಆಟವಾಡುವಾಗ ಅದನ್ನು ನೋಡಿದ್ದಾಗಿ ಹೇಳಿದ. ಈ ಸಂಭಾಷಣೆಯು, ಅನುಭವದ ಕಲಿಕೆಯ ಹಂಚಿಕೆಗೆ ಅವಕಾಶವನ್ನು ಒದಗಿಸಿತು.

ತದನಂತರ, ತನ್ನ ಬಾಲ್ಯದಲ್ಲಿ ಮಿಂಚುಹುಳಗಳನ್ನು ಅನೇಕ ಬಾರಿ ನೋಡಿದ್ದನ್ನು ಶಿಕ್ಷಕಿಯು ಉಲ್ಲೇಖಿಸಿ, ಇಂದಿನ ಕಾಲದಲ್ಲಿ ಇವುಗಳು ಕಾಣಸಿಗುವುದು ಅಪರೂಪ ಎಂದು ಹೇಳಿದರು. ಈ ಮಿಂಚುಹುಳಗಳು ಎಲ್ಲಿಂದ ಬೆಳಕನ್ನು ಪಡೆಯುತ್ತವೆ ಎನ್ನುವ ಕುತೂಹಲವು ಮಕ್ಕಳನ್ನು ಕಾಡಿತು. ಅವರ ಉತ್ತರಗಳು ಆಸಕ್ತಿಕರವಾಗಿದ್ದವು. ಅವರು ಬ್ಯಾಟರಿ ಮತ್ತು ಸೌರಶಕ್ತಿಯನ್ನು ಉಲ್ಲೇಖಿಸಿದರು. ಅಲ್ಲದೆ ಟಿ.ವಿ ಕಾರ್ಯಕ್ರಮವೊಂದರಲ್ಲಿ, ಕಾಡಿನಲ್ಲಿ ಕರಡಿಯೊಂದು ಮಿಂಚುಹುಳಕ್ಕೆ ತನ್ನ ಬೆಳಕನ್ನು ಪಡೆಯಲು ಸಹಾಯ ಮಾಡಿದ್ದು ಕಂಡಿದ್ದನ್ನು ಹೇಳಿದರು!.

ಪಕ್ಷಿಗಳು ಮತ್ತು ಗೂಡುಗಳನ್ನು ಒಳಗೊಂಡಿದ್ದ ಪದ್ಯವನ್ನು ನಾವು ಮಾಡಬೇಕಾಗಿದ್ದರಿಂದ ಹಾಗೂ ಮರಗಳ ಕುರಿತ ಕಥೆಯನ್ನು ಓದಿದ್ದ ಕಾರಣ, ಮಕ್ಕಳನ್ನು ಹೊರಗೆ ಕರೆದುಕೊಂಡು ಹೋಗಿ ನಮ್ಮ ಸುತ್ತಮುತ್ತ ಇರುವ ವಿವಿಧ ಮರಗಳನ್ನು ಅವರು ನೋಡುವಂತೆ ಮಾಡಬಹುದೆಂದು ನಾವು ಭಾವಿಸಿದೆವು. ಈ ಮಕ್ಕಳು ಶಾಲೆಯ ಸುತ್ತಮುತ್ತ ಇರುವ ಮನೆಗಳಿಂದ ಬಂದಿರುವ ಕಾರಣ, ನಮ್ಮ ಅಕ್ಕಪಕ್ಕದ ಪರಿಸರವನ್ನು ಅವರಿಗೆ ತೋರಿಸಿ ಸ್ಥಳೀಯ ಮಟ್ಟದಲ್ಲಿರುವ ವಿವಿಧ ಮರಗಳನ್ನು ತೋರಿಸುವ ಅವಕಾಶ ಇಲ್ಲಿ ಲಭಿಸಿತ್ತು.

ಶಾಲೆಯ ಎದುರುಗಡೆಯೇ ದೊಡ್ಡದಾದ ಮರವೊಂದು ಇತ್ತು. ವಿಶೇಷವೆಂದರೆ ಮೂರು ಮರಗಳು ಒಂದಾಗಿ ಬೆಳೆದಿದ್ದವು. ಅವುಗಳೆಂದರೆ ಬರಗದ್ (bargad), ಆಲದ ಮರ ಮತ್ತು ಬೇವಿನ ಮರ. ಈ ಎಲ್ಲ ಮೂರು ಮರಗಳ ಕಾಂಡಗಳು ಮತ್ತು ಕೊಂಬೆಗಳು ಪರಸ್ಪರ ಹೆಣೆದುಕೊಂಡಿದ್ದವು. ಎಲೆಗಳ ಆಕಾರ, ಬಣ್ಣ ಮತ್ತು ಮೇಲ್ಮೈರಚನೆ ಹಾಗೂ ಆಲದ ಮರದ ನೇತಾಡುವ ಬೇರುಗಳು – ಹೀಗೆ ಮೂರು ಬೇರೆಬೇರೆ ಮರಗಳ ವೈಶಿಷ್ಟ್ಯಗಳನ್ನು ಪಟ್ಟಿ ಮಾಡಿ ಇವುಗಳ ನಡುವಿನ ವ್ಯತ್ಯಾಸವನ್ನು ಮಕ್ಕಳು ಅರಿತುಕೊಳ್ಳಲು ನಾವು ಸಹಾಯ ಮಾಡಿದೆವು. ಮರದ ಕೆಳಗೆ ವಿಶ್ರಮಿಸುತ್ತಿದ್ದ ಕೆಲವು ಹಿರಿಯರು ಮಕ್ಕಳಿಗೆ ಸ್ಪರ್ಶಿಸಲು ಮತ್ತು ಅನುಭವಿಸಲು ಕೆಲವು ಎಲೆಗಳನ್ನು ನೀಡಿದರು. ಮೇಲಿನಿಂದ ನೇತಾಡುವ ಬೇರುಗಳ ಮೂಲಕ ಅಳಿಲುಗಳು ಮೇಲಕ್ಕೆ ಹತ್ತುವುದನ್ನು ಹಾಗೂ ಕಾಗೆಗಳು ಹಾಗೂ ಗುಬ್ಬಚ್ಚಿಗಳಂತಹ ಹಕ್ಕಿಗಳು ಮರದ ಸುತ್ತಮುತ್ತ ಹಾರಾಡುವುದನ್ನು ಮತ್ತು ಮರದಲ್ಲಿ ಕುಳಿತುಕೊಳ್ಳುವುದನ್ನು ಮಕ್ಕಳು ಗಮನಿಸಿದರು. ಒಬ್ಬ ಹುಡುಗನು ಮರದಲ್ಲಿ ಜೇನುಗೂಡನ್ನು ಗಮನಿಸಿದ. ನನ್ನನ್ನು ಒಮ್ಮೆಗೆ ತಡೆದು ನಿಲ್ಲಿಸಿ ಆತ ಹೇಳಿದ್ದನ್ನು ದೃಢೀಕರಿಸುವಂತೆ ಮಾಡಿದ. ನಂತರ ನಾವು ಹಾಗೆಯೇ ಅಕ್ಕಪಕ್ಕದಲ್ಲಿ ಓಡಾಡುತ್ತಾ ಮುಂದಕ್ಕೆ ಸಾಗಿ ಪಪ್ಪಾಯ

ಮತ್ತು ಬೋರೆ ಹಣ್ಣಿನಂತಹ ಇತರ ಮರಗಳನ್ನು ನೋಡಿದೆವು. ಮಕ್ಕಳಿಗೆ ಈಗಾಗಲೇ ಈ ಮರಗಳ ಪರಿಚಯವಿತ್ತು.

ನಾವು ತರಗತಿಗೆ ಮರಳಿದಾಗ ಪ್ರತಿ ಮಗುವೂ ಬೇರೆಬೇರೆ ಮರಗಳ ಎಲೆಗಳನ್ನು ತಂದಿದ್ದರು. ಅವರು ಏನನ್ನು ನೋಡಿದ್ದಾರೆ ಎಂಬುದನ್ನು ಶಿಕ್ಷಕಿ ಮತ್ತು ನಾನು ಸೇರಿ ಮಕ್ಕಳೊಂದಿಗೆ ಚರ್ಚಿಸಿದೆವು. ನಂತರ ನಾವು ವಿವಿಧ ಎಲೆಗಳ ಆಕಾರದೊಂದಿಗೆ ಒಂದು ಚಿತ್ರಪತ್ರವನ್ನು ರಚಿಸಿದೆವು ಹಾಗೂ ಅವುಗಳ ಕೆಳಗೆ ಹೆಸರುಗಳನ್ನು ಬರೆದು ತರಗತಿಯಲ್ಲಿ ತೂಗುಹಾಕಿದೆವು. ತದನಂತರ, ಹಕ್ಕಿಯು ಗೂಡನ್ನು ಕಟ್ಟುವ ಪದ್ಯವನ್ನು ಅಭಿನಯದೊಂದಿಗೆ ಪಠಿಸಿದೆವು. ಮರದಲ್ಲಿ ಹಕ್ಕಿಗಳನ್ನು ಅವುಗಳ ಗೂಡುಗಳಲ್ಲಿ ನೋಡಿರುವ ಕುರಿತು ಮಕ್ಕಳು ಮಾತನಾಡಿದರು. ತನ್ನ ಮನೆಯ ಛಾವಣಿಯಲ್ಲಿ, ಕಡ್ಡಿಯ ತುಂಡುಗಳನ್ನು ಬಳಸಿ ಪಾರಿವಾಳವೊಂದು ಹೇಗೆ ಗೂಡನ್ನು ಕಟ್ಟಿದೆ ಎಂಬುದನ್ನು ವಿದ್ಯಾರ್ಥಿಯೊಬ್ಬ ವಿವರಿಸಿದನು.

## ಪಠ್ಯಕ್ರಮದ ಅಗತ್ಯತೆಗಳಿಗೆ ಕಥೆಗಳನ್ನು ಜೋಡಿಸುವುದು

ನಂತರ ಶಿಕ್ಷಕಿಯು ತಾವು ಮಾಡಬೇಕಿದ್ದ ಅಧ್ಯಾಯವನ್ನು ಪ್ರಾರಂಭಿಸಿದರು. ಮೊದಲಿಗೆ ಮರಗಳನ್ನು ಆಧರಿಸಿದ ಚಿತ್ರದ ಸಂಭಾಷಣೆಯಲ್ಲಿ  ಮಕ್ಕಳನ್ನು ತೊಡಗಿಸಿಕೊಳ್ಳುವ ಮೂಲಕ ಮತ್ತು ಒಂದಷ್ಟು ಸುಳಿವಿನ ಮೂಲಕ ಮರಗಳು ಹೇಗೆ ನಮ್ಮ ಗೆಳೆಯ ಎನಿಸಿವೆ ಎಂಬುದನ್ನು ವಿವರಿಸಿದರು.

- ಒಂದು ವೇಳೆ ಮರಗಳು ನಿಮ್ಮ ಗೆಳೆಯರಾಗಿದ್ದರೆ ಅವುಗಳನ್ನು ನೀವು ಹೇಗೆ ನೋಡಿಕೊಳ್ಳುತ್ತೀರಿ?
- ಅವುಗಳನ್ನು ನೀವು ಎಲ್ಲಿಗೆ ಕೊಂಡೊಯ್ಯುತ್ತೀರಿ? ಏಕೆ?
- ನೀವು ಯಾವ ಮರಗಳನ್ನು ನಿಮ್ಮ ಗೆಳೆಯರಾಗಿ ಸ್ವೀಕರಿಸುತ್ತೀರಿ? ಏಕೆ?

ಮಕ್ಕಳು ವಿಭಿನ್ನ ಉತ್ತರಗಳನ್ನು ನೀಡಿದರು. ಮುಖ್ಯವಾಗಿ ಮಾವು, ಸೀಬೆ, ದಾಳಿಂಬೆ, ಹುಣಸೆ ಮತ್ತು ಬೇವಿನ ಮರಗಳು ತಮ್ಮ ಗೆಳೆಯರಾಗಬೇಕೆಂದು ಅವರು ಇಚ್ಛಿಸಿದರು. ಇದಕ್ಕೆ ಅವರು ನೀಡಿದ ಕಾರಣವೆಂದರೆ, ಈ ಮರಗಳು ದೊಡ್ಡದಾಗಿದ್ದು ಅವುಗಳ ಅಡಿಯಲ್ಲಿ ಆಟವಾಡಬಹುದು, ಅವುಗಳ ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳಬಹುದು ಹಾಗೂ ಅವುಗಳ ಹಣ್ಣುಗಳನ್ನು ಮಾರಿ ಹಣ ಗಳಿಸಬಹುದು ಇತ್ಯಾದಿ. ಮಾರಿ ಹಣ ಗಳಿಸುವುದಕ್ಕಾಗಿ ಮರವು ಏಕೆ ಹಣ್ಣುಗಳನ್ನು ನೀಡಬೇಕೆಂದು ಪ್ರಶ್ನಿಸಿದಾಗ, ಮರವೂ ಸಹ ಸ್ನೇಹದ ಸಂಕೇತವಾಗಿ ತನ್ನ ಪಾಲಿನ ಜವಾಬ್ದಾರಿಯನ್ನು ಈಡೇರಿಸಬೇಕು ಎಂದು ಮಗುವೊಂದು ಉತ್ತರಿಸಿತು.

## ದೃಷ್ಟಿಕೋನಗಳು ಮತ್ತು ಶಿಕ್ಷಣಶಾಸ್ತ್ರೀಯ ವಿಧಾನಗಳು

ಕಥೆ ಹೇಳುವ ಮಾಧ್ಯಮವನ್ನು ಇಲ್ಲಿ ಪರಿಚಯಿಸುವುದರಿಂದ ಹಾಗೂ ಸಂಭಾಷಣೆ ಮತ್ತು ಚರ್ಚೆಗೆ ಅವಕಾಶವನ್ನು ಕಲ್ಪಿಸುವುದರಿಂದ 'ಹರ್‌ಪೇಡ್ ಜರೂರಿ ಹೈ' ಕಥೆಯನ್ನು ಮಕ್ಕಳಿಗೆ ತಲುಪಿಸಲು ನನಗೆ ಸಹಾಯ ಮಾಡಿದೆ, ಮಾತ್ರವಲ್ಲದೆ ಮಕ್ಕಳ ಆಸಕ್ತಿ ಮತ್ತು ಗಮನವನ್ನು ಸೆಳೆದು ಕೊನೆಯ ತನಕ ಉಳಿಸುವಂತೆ ಮಾಡಲು ಹಾಗೂ ತರಗತಿಯ ಅಗತ್ಯತೆಗೆ ತಕ್ಕುದಾಗಿ ಅದನ್ನು ಮಾರ್ಪಡಿಸಿ ಆವೇಗವನ್ನು ರೂಪಿಸಲು ಸಾಧ್ಯವಾಯಿತು ಎಂಬುದನ್ನು ನಾನು ಅರಿತುಕೊಂಡೆ.

ಪಠ್ಯಕ್ರಮದ ವಿಷಯವೂ ಸಹ ಪ್ರಮುಖವಾಗಿತ್ತು. ಏಕೆಂದರೆ ಅದರಲ್ಲಿನ ಕಥೆಯು ಮಕ್ಕಳನ್ನು ಸಕ್ರಿಯರನ್ನಾಗಿಸಿತು, ಮಾತ್ರವಲ್ಲದೆ ಅವರ ಆಸಕ್ತಿಯನ್ನು ಕುದುರಿಸಿ ಅವರು ಲವಲವಿಕೆಯಿಂದ ಪಾಲ್ಗೊಳ್ಳುವಂತೆ ಮಾಡಿತು. ವಿಶೇಷವಾಗಿ ಚರ್ಚಿಸಲಾದ ವಿಷಯವು ಅವರು ಸುಲಭವಾಗಿ ಅದರೊಂದಿಗೆ ಗುರುತಿಸಿಕೊಂಡು ತಮ್ಮ ಕೊಡುಗೆಯನ್ನು ನೀಡಬಹುದಾದ ವಿಷಯವಾಗಿತ್ತು. ಮಕ್ಕಳ ಜೊತೆಗೆ ನಡೆಸಿದ ಸಂಭಾಷಣೆ, ಒಟ್ಟು ಚರ್ಚೆಗಳು ಹಾಗೂ ಅವುಗಳನ್ನು ತರಗತಿಯಲ್ಲಿ ಹಂಚಿಕೊಂಡ ರೀತಿಯು ನಿಜಕ್ಕೂ ಆನಂದದಾಯಕ ಮತ್ತು ಸಂವರ್ಧಕ ಎನಿಸಿತು. ಪಠ್ಯಕ್ರಮದ ವಿಷಯಗಳನ್ನು ಮುಂದಕ್ಕೆ ಕೊಂಡೊಯ್ಯುವುದಕ್ಕಾಗಿ ನವೀನ ವಿಧಾನಗಳನ್ನು ಕ್ರೋಢೀಕರಿಸುವುದಕ್ಕಾಗಿ ಸಕ್ರಿಯವಾಗಿ ಮತ್ತು ಕ್ಷಣಮಾತ್ರದಲ್ಲಿ ಪ್ರಯತ್ನಿಸುವುದು ನನ್ನ ಪಾಲಿನ ಆಸಕ್ತಿಯ ವಿಷಯವಾಗಿದೆ. ಮಕ್ಕಳು ಮಾತ್ರವಲ್ಲದೆ ಅವರ ಶಿಕ್ಷಕಿ ಮತ್ತು ನಾನು ಸೇರಿ ಈ ಅನುಭವವನ್ನು ಆನಂದಿಸಿದೆವು. ಒಂದು ರೀತಿಯಲ್ಲಿ ಇದು ಅರ್ಥಪೂರ್ಣ ಕಲಿಕೆ ಎನಿಸಿತು ಹಾಗೂ ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರದ ಕುರಿತು ಏನನ್ನು ಕಲಿಯುತ್ತಾರೆಯೋ ಹಾಗೂ ತರಗತಿಯಲ್ಲಿ ತೊಡಗಿಸಿಕೊಳ್ಳುತ್ತಾರೆಯೋ, ಅದರೊಂದಿಗೆ ಸಂಬಂಧವನ್ನು ಕಲ್ಪಿಸಿಕೊಳ್ಳುವ ರೀತಿಯನ್ನು ಇದು ಇನ್ನಷ್ಟು ವರ್ಧಿಸಿತು. ದಿನದ ಕೊನೆಗೆ ಶಿಕ್ಷಕಿ ನನಗೆ ಈ ರೀತಿ ಹೇಳಿದರು: "ನೀವು ವಿದ್ಯಾರ್ಥಿಗಳಿಗೆ ಕಥೆಯನ್ನಷ್ಟೇ ಹೇಳುತ್ತೀರಿ ಎಂದು ನಾನು ಭಾವಿಸಿದ್ದೆ; ನಾವು ಇದೆಲ್ಲವನ್ನು ಮಾಡಿ ಇಂದಿನ ಪಾಠವನ್ನು ಮುಗಿಸುತ್ತೇವೆ ಎಂಬುದನ್ನು ನಾನು ನಿರೀಕ್ಷಿಸಿರಲಿಲ್ಲ!." ಇಂತಹ ಶಿಕ್ಷಣಶಾಸ್ತ್ರೀಯ ವಿಧಾನಗಳು, ಪ್ರತಿ ದಿನ ತರಗತಿಯ ಪಾಠದಲ್ಲಿ ತೊಡಗಿಸಿಕೊಳ್ಳುವಾಗ ತಮ್ಮ ಪರಿಸರದಲ್ಲಿ ದೊರೆಯುವ ಎಲ್ಲಾ ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಿಸಬೇಕು ಎನ್ನುವ ಕಲ್ಪನೆಯನ್ನು ನೀಡಿದವು ಎಂದು ಅವರು ಹೇಳಿದರು.

## ಮಗು-ಸ್ನೇಹಿ ವಿಧಾನ

ಮೇಲಿನ ಉದಾಹರಣೆಯು ತರಗತಿಯೊಳಗಿನ ಅಭ್ಯಾಸಕ್ಕೆ ಒಂದು ಉದಾಹರಣೆಯಾಗಿದೆ. ತರಗತಿಯೊಳಗೆ ಹಾಗೂ ಪ್ರತಿ ಮಗುವಿನ ಮಟ್ಟದಲ್ಲಿ ಯೋಚನೆ, ಕಲ್ಪನೆ ಮತ್ತು ಸಂವಹನದ ಪ್ರಪಂಚದ ಬಾಗಿಲನ್ನು ತೆರೆಯುವುದಕ್ಕಾಗಿ ಈ ಸರಳ ಕಥೆಗಳು

ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ನೋಡಿ ಮಕ್ಕಳು, ಶಿಕ್ಷಕರು ಹಾಗೂ ನಾನು ಅಚ್ಚರಿಗೊಂಡ ಕುರಿತು ನನ್ನಲ್ಲಿ ಇನ್ನೂ ಸಾಕಷ್ಟು ನಿದರ್ಶನಗಳಿವೆ.

ಶೈಕ್ಷಣಿಕವಾಗಿ ಹೇಳುವುದಾದರೆ, ಕಥಾ ನಿರೂಪಣೆಯು, ಬುನಾದಿ ಎಂದು ಭಾವಿಸಲಾದ ಈ ಕೆಳಗಿನ ಕಲಿಕಾ ಫಲಿತಾಂಶಗಳನ್ನು ಸಾಧಿಸಲು ಸಹಾಯ ಮಾಡುವ ಶಿಕ್ಷಣಶಾಸ್ತ್ರೀಯ ವಿಧಾನವೆನಿಸಿದೆ. ವಿದ್ಯಾರ್ಥಿಯು ಈ ಕೆಳಗಿನವುಗಳನ್ನು ಸಾಧಿಸಲು ಸಾಧ್ಯವಾಗುತ್ತದೆ:

- ಪದಗಳನ್ನು ಚಿತ್ರಗಳೊಂದಿಗೆ ಗುರುತಿಸುವುದು
- ಚಿತ್ರದಲ್ಲಿ ನೋಡಿದ ಪರಿಚಿತ ವಸ್ತುಗಳನ್ನು ಹೆಸರಿಸುವುದು
- ಅವರು ಇಚ್ಛಿಸಿದಲ್ಲಿ ಮನೆಯ ಭಾಷೆ/ಶಾಲೆಯ ಭಾಷೆ/ ಇಂಗ್ಲಿಷ್/ ಸಂಕೇತದ ಭಾಷೆ, ಮೌಖಿಕವಾಗಿ ಅಥವಾ ಲಿಖಿತವಾಗಿ (ನುಡಿಗಟ್ಟುಗಳಲ್ಲಿ/ಚುಟುಕಾದ ವಾಕ್ಯಗಳಲ್ಲಿ) ಕಥೆಗಳಿಗೆ ಸಂಬಂಧಿಸಿದ ಗ್ರಹಿಕೆಯ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವುದು
- ಕಥೆಯಲ್ಲಿ ಪಾತ್ರಗಳು ಮತ್ತು ಘಟನೆಗಳ ಅನುಕ್ರಮವನ್ನು ಗುರುತಿಸುವುದು
- ತಮ್ಮ ಮನೆಯ ಭಾಷೆ/ ಶಾಲೆಯ ಭಾಷೆ/ ಇಂಗ್ಲಿಷ್/ ಸಂಕೇತದ ಭಾಷೆಯಲ್ಲಿ ಪಾತ್ರಗಳು, ಕಥಾ ಹಂದರ ಇತ್ಯಾದಿಗಳ ಕುರಿತು ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ವ್ಯಕ್ತಪಡಿಸುವುದು ಮತ್ತು ಪ್ರಶ್ನೆಗಳನ್ನು ಕೇಳುವುದು.
- ಕಥೆಗೆ ಪ್ರತಿಕ್ರಿಯೆಯಾಗಿ ಕೆಲವು ಪದಗಳು/ಚುಟುಕಾದ ವಾಕ್ಯಗಳನ್ನು ಬಿಡಿಸುವುದು/ಬರೆಯುವುದು
- ತಮ್ಮ ಸ್ವಂತ ಅನುಭವಗಳನ್ನು ಮೆಲುಕು ಹಾಕುವುದು ಮತ್ತು ತರಗತಿಯ ಚರ್ಚೆಗೆ ಅವುಗಳನ್ನು ಸಹ ಸೇರಿಸುವುದು

ಮೌಲ್ಯಗಳನ್ನು ಬಿತ್ತುವುದಕ್ಕಾಗಿ ಮತ್ತು ಪಠ್ಯಕ್ರಮದ ವಿಷಯದೊಂದಿಗೆ ಸಂಬಂಧವನ್ನು ರೂಪಿಸುವುದಕ್ಕಾಗಿ ಕಥೆಗಳೊಂದಿಗೆ ನಿರಂತರವಾಗಿ ತೊಡಗಿಸಿಕೊಳ್ಳುವುದರಿಂದ 'ಹೌ ಚಿಲ್ಡ್ರನ್‌ಲರ್ನ್' ಎಂಬ ಪುಸ್ತಕದಲ್ಲಿ ಜಾನ್‌ಹೋಲ್ಟ್‌ಅವರು ಹೇಳಿರುವ ಮಾತು ನನಗೆ ಆಗಾಗ್ಗೆ ನೆನಪಿಗೆ ಬರುತ್ತದೆ: "ಇದನ್ನು ನಂಬಿಕೆಯಿಂದೇ ಕರೆಯಿರಿ. ಆ ನಂಬಿಕೆ ಏನೆಂದರೆ ಸ್ವಾಭಾವಿಕವಾಗಿ ಮಾನವನು ಕಲಿಯುವ ಪ್ರಾಣಿ ಎನಿಸಿದ್ದಾನೆ. ಹೀಗಾಗಿ ನಾವು ಮಕ್ಕಳನ್ನು ಕಲಿಯಲು ' ಉತ್ತೇಜಿಸುವ' ಅಗತ್ಯವಿಲ್ಲ. ಅವರು ಕಲಿಯುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನಾವು ಅವರಿಗೆ ಹಾನಿ ಮಾಡಬೇಕಾದ ಅಗತ್ಯವಿಲ್ಲ. ನಾವೇನು ಮಾಡಬೇಕು ಎಂದರೆ, ಆದಷ್ಟು ಮಟ್ಟಿಗೆ ಈ ಪ್ರಪಂಚವನ್ನು ಶಾಲೆ ಮತ್ತು ತರಗತಿ ಕೋಣೆಯೊಳಗೆ ತರಬೇಕು; ಮಕ್ಕಳಿಗೆ ಬೇಕಾಗುವಷ್ಟು ಮತ್ತು ಅವರು ಕೇಳುವಷ್ಟು ಸಹಾಯ ಮತ್ತು ಮಾರ್ಗದರ್ಶನವನ್ನು ನೀಡಬೇಕು; ಅವರು ಮಾತನಾಡಲು ಇಚ್ಛಿಸುವಾಗ ಅವರ ಮಾತುಗಳನ್ನು ಗೌರವದಿಂದ ಆಲಿಸಬೇಕು; ಹಾಗೂ ಅವರ ದಾರಿಯಿಂದ ದೂರಕ್ಕೆ ಸರಿಯಬೇಕು. ಉಳಿದುದನ್ನು ಅವರು ಸಾಧಿಸುತ್ತಾರೆ ಎಂಬ ನಂಬಿಕೆ ನಮಗೆ ಇರಬೇಕು'.


**ಪರಾಮರ್ಶನಗಳು:**

'ಹರ್ ಪೇಡ್ ಜರೂರಿ ಹೈ', ಪ್ರಭಾ ರಾಮ್ ಮತ್ತು ಶೀಲಾ ಪ್ರುಟ್, ಪ್ರಥಮ್ ಬುಕ್ಸ್.
ಚಿತ್ರಗಳು: ಸಂಗೀತಾ ಕಡೂರು, ಅನುವಾದ: ದೀಪಾ ತ್ರಿಪಾಠಿ.
https:// storyweaver.org.in/stories/17146-har-ped-zaruri-hai





**ಮಧುಮಿತಾ ಆರ್** ಅವರು ಮಧ್ಯಪ್ರದೇಶದ ಸಗರ್‌ನಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಅಸೋಸಿಯೇಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಬೆಂಗಳೂರಿನಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಪರಿಸರ, ಕಥೆ ಹೇಳುವುದು ಮತ್ತು ರಂಗಭೂಮಿ ಆಧಾರಿತ ಚಟುವಟಿಕೆಗಳ ಮೂಲಕ ಮಕ್ಕಳೊಂದಿಗೆ ತೊಡಗಿಸಿಕೊಳ್ಳುವುದರಲ್ಲಿ ಅವರು ಆಸಕ್ತಿ ಹೊಂದಿದ್ದಾರೆ. ಅವರನ್ನು mathumitha.r@azimpremjifoundation.org ಮೂಲಕ ಸಂಪರ್ಕಿಸಬಹುದು.



ಅನುವಾದ: **ಮೆಲ್ವಿನ್ ಮೆಂಡೋನ್ಸಾ** | ಪರಿಶೀಲನೆ: **ಲತಾ ಕೆ.ಸಿ.**